**DW-1** OS15/2019

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ: 15/2019**

ಡಿ.ಡಬ್ಲೂ:01 ಶ್ರೀ ಕೆ ಪ್ರಕಾಶ್

**ಸಾಕ್ಷಿಯನ್ನು ದಿನಾಂಕಃ 08-01-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ವಾದಿಯ ಪರ ಶ್ರೀ.ಎಸ್ ಕೆ ಎಸ್ ವಕೀಲರಿಂದ**

1. ಸಾಕ್ಷಿಗೆ ನಿಪಿ6 ದಾಖಲೆಯನ್ನು ತೋರಿಸಲಾಗಿ ಮೂಲ ವಾದಿ ಆದ ನಂಜಪ್ಪಾಚಾರಿರವರು ತಹಸೀಲ್ದಾರ್ ಮತ್ತು 1 ನೇ ಪ್ರತಿವಾದಿಯ ವಿರುದ್ದ ಹೂಡಿರುವ ಪ್ರಕರಣದ ಆದೇಶ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ6 ಆದೇಶದಂತೆ ತಹಸೀಲ್ದಾರ್ ರವರು ಮಾಡಿದ ಮುಟೇಷನ್ ಆದೇಶವನ್ನು ಸಹಾಯಕ ಕಮಿಷನರ್ ನ್ಯಾಯಾಲಯವು ರದ್ದು ಪಡಿಸಿದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ತಹಸೀಲ್ದಾರ್ ನ್ಯಾಯಾಲಯವು ನೀಡಿದ ಹಿಂಬರಹವನ್ನು ಸಹ ಸದರಿ ಆದೇಶದಂತೆ ರದ್ದುಪಡಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ6 ರ ಆದೇಶದಂತೆ ಖಾತೆಯನ್ನು ಮೂಲ ವಾದಿ ಆದ ನಂಜಪ್ಪಾಚಾರಿರವರ ಹೆಸರಿನಲ್ಲಿ ಮಾಡಬೇಕು ಎಂದು ನಿರ್ದೇಶಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಹಾಯಕ ಕಮಿಷನರ್ ನ್ಯಾಯಾಲಯದಲ್ಲಿ ಹಾಕಿದ ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ6 ರ ಆದೇಶವಾದ ನಂತರ ಏನಾದರೂ ಆ ವಿಚಾರ ನನಗೆ ಗೊತ್ತಾಯಿತಾ ಎಂದರೆ ಇಲ್ಲ. ನನ್ನ ತಾಯಿ ಆದ 1 ನೇ ಪ್ರತಿವಾದಿಯು ನಿಪಿ6 ರ ಬಗ್ಗೆ ನನಗೆ ಏನು ಹೇಳಿರುವುದಿಲ್ಲ. ಸದರಿ ನನ್ನ ತಾಯಿ ಆದ 1 ನೇ ಪ್ರತಿವಾದಿಯು ಸಹಾಯಕ ಕಮಿಷನರ್ ನ್ಯಾಯಾಲಯದಲ್ಲಿ ವಕೀಲರನ್ನು ನೇಮಕಾತಿ ಮಾಡಿ ಸದರಿ ಪ್ರಕರಣವನ್ನು ನಡೆಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ನಿಪಿ6 ಸಹಾಯಕ ಕಮಿಷನರ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ನಾನಾಗಲೀ, ನನ್ನ ತಾಯಿಯವರಾದ 1 ನೇ ಪ್ರತಿವಾದಿ ಆಗಲೀ, ಹಾಗೂ ಇತರೆ ಪ್ರತಿವಾದಿರವರಾಗಲೀ ಮೇಲ್ಮನವಿ ಸಲ್ಲಿಸಿದ್ದೇವಾ ಎಂದರೆ ಇಲ್ಲ. ಸದರಿ ನಿಪಿ6 ರ ಆದೇಶ ಈಗಲೂ ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ನಿಪಿ6 ರ ಆದೇಶವು 28.01.2017 ರಂದು ಆಗಿದ್ದು ಅದಾದ ಒಂದೂವರೆ ವರ್ಷದ ನಂತರ ನಿಪಿ8 ರಂತೆ ನಾನು ಮತ್ತು ಇತರ ಪ್ರತಿವಾದಿಗಳು ನನ್ನ ತಾಯಿಯವರಾದ 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ8 ದಾಖಲೆಗಳಲ್ಲಿರುವ ಪ್ರತಿಯೊಂದು ಸಹಿಗಳನ್ನು ತೋರಿಸಲಾಗಿ ಅದು ತನ್ನದು ಎಂದು ಗುರುತಿಸುತ್ತಾರೆ. ಸದರಿ ಸಹಿಗಳನ್ನು ಈಗ ಕ್ರಮವಾಗಿ ನಿಪಿ8 ಎ ಇಂದ 8 ಹೆಚ್ ಎಂದು ಗುರುತಿಸಲಾಯಿತು. ಸದರಿ ನಿಪಿ8 ರ 2 ನೇ ಪುಟದ ಹಿಂದಿನ ಪುಟದಲ್ಲಿರುವ ಛಾಯ ಚಿತ್ರವನ್ನು ತೋರಿಸಲಾಗಿ ಅದು ತನ್ನದು ಎಂದು ಗುರುತಿಸಿದ ಮೇರೆಗೆ ಅದನ್ನು ಈಗ ನಿಪಿ8 ಐ ಎಂದು ಗುರುತಿಸಲಾಯಿತು.

3. ನಿಪಿ6 ರ ಆದೇಶ ಅಸ್ತಿತ್ವದಲ್ಲಿ ಇದ್ದರೂ ಸಹ ಆ ವಿಚಾರ ಗೊತ್ತಿದ್ದರೂ ಸಹ ನಾನು ಮತ್ತು ಇತರ ಪ್ರತಿವಾದಿಗಳು ನಿಪಿ8 ರಂತೆ ಹಕ್ಕು ಬಿಡುಗಡೆ ಪತ್ರವನ್ನು 1 ನೇ ಪ್ರತಿವಾದಿಯ ಪರವಾಗಿ ಅಕ್ರಮವಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಇತರ ಪ್ರತಿವಾದಿಗಳು ನಿಪಿ6 ರ ಸಹಾಯಕ ಕಮಿಷನರ್ ರವರ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಆದ 1 ನೇ ಪ್ರತಿವಾದಿಯು ನನಗೆ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾನ ಪತ್ರವು ನಿಪಿ9 ರಂತೆ ನಿಪಿ8 ನ್ನು ಮಾಡಿದ ದಿನವೇ ಮಾಡಲಾಗಿದೆ ಎಂದರೆ ನನಗೆ ನೆನಪಿಲ್ಲ. ಸದರಿ ನಿಪಿ9 ದಾನ ಪತ್ರದಲ್ಲಿರುವ

ಬಾವ ಚಿತ್ರಗಳು ಹಾಗೂ ಸಹಿಗಳು ನನಗೆ ಸೇರಿದ್ದು ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿದ್ದು ಸದರಿ ಬಾವಚಿತ್ರಗಳನ್ನು9 ಎ ಮತ್ತು 9 ಬಿ ಹಾಗೂ ಸಹಿಗಳನ್ನು 9 ಸಿ ಇಂದ 9 ಇ ಎಂದು ಗುರುತಿಸಲಾಯಿತು. ಸದರಿ ನಿಪಿ8 ಮತ್ತು 9 ರಲ್ಲಿರುವ ನನ್ನ ಸಹಿಗಳು ಒಂದೇ ಆಗಿದೆ ಎಂದರೆ ಸರಿ.

**4.** ನಿಪಿ6 ರ ಆದೇಶವು ಅಸ್ತಿತ್ವದಲ್ಲಿ ಇದ್ದರೂ ಸಹ ಅದನ್ನು ಉಲ್ಲಂಘಿಸಿ ಮೊದಲು ನಿಪಿ8 ರಂತೆ ಬಿಡುಗಡೆ ಪತ್ರವನ್ನು ತಯಾರಿಸಿ ಅದೇ ದಿನ ನಿಪಿ9 ರಂತೆ ದಾನ ಪತ್ರವನ್ನು ಅಕ್ರಮವಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾನು ದಾವಾ ಆಸ್ತಿಯಲ್ಲಿ ಅಭಿವೃದ್ಧಿ ಮಾಡಿದ್ದೇನೆ ಎಂದು ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದು ಯಾವ ಅಭಿವೃದ್ಧಿ ಎಂದರೆ ಏನು ಇಲ್ಲ. ಸಾಕ್ಷಿ ಮುಂದುವರೆದು ಮಳೆಯ ಸಂದರ್ಬದಲ್ಲಿ ಅಕ್ಕಿ, ರಾಗಿ ಬೆಳೆಯುತ್ತೇವೆ ಎನ್ನುತ್ತಾರೆ. ಸದರಿ ವಿಚಾರವನ್ನು ತೋರಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. ಸದರಿ ನನ್ನ ಪ್ರಕಾರ ನಾವು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ತೋರಿಸಲು ಛಾಯ ಚಿತ್ರಗಳನ್ನು ಹಾಜರುಪಡಿಸಿದ್ದೇನಾ ಎಂದರೆ ನನಗೆ ಗೊತ್ತಿಲ್ಲ. ಸದರಿ ನ್ಯಾಯಾಲಯದ ಮೂಲಕ ಕೋರ್ಟ್ ಕಮಿಷನರ್ ನೇಮಕಾತಿ ಮಾಡಿ ದಾವಾ ಆಸ್ತಿಯ ಬಗ್ಗೆ ಇತರ ಮಾಹಿತಿಗಳನ್ನು ಪಡೆಯಲು ಅರ್ಜಿ ಹಾಕಿದರೆ ನನಗೇನಾದರೂ ಅಭ್ಯಂತರ ಇದೆಯಾ ಎಂದರೆ ನನಗೆ ಗೊತ್ತಿಲ್ಲ.

**5.** ನನ್ನ ತಾಯಿ ಆದ 1 ನೇ ಪ್ರತಿವಾದಿಯು ಆರೋಗ್ಯದಲ್ಲಿ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಕಾಲು ನೋವಿದೆ ಎನ್ನುತ್ತಾರೆ. ಸದರಿ 1 ನೇ ಪ್ರತಿವಾದಿಯ ಸಾಕ್ಷ್ಯವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಇತ್ತೀಚೆಗೆ ನಿಡಿ3 ನ್ನು ಹಾಜರುಪಡಿಸಿದ್ದು ಅದರಲ್ಲಿ ನನ್ನ ತಾತನವರ ಆಸ್ತಿಯು ವಿಭಾಗ ಆಗಿರುವ ದಾಖಲೆ ಆಗಿರುತ್ತದೆ. ಸದರಿ ನಿಡಿ3 ರಂತೆ ವಿಭಾಗವು ನನ್ನ ದೊಡ್ಡಪ್ಪನವರಾದ ಶ್ರೀನಿವಾಸರೆಡ್ಡಿ, ಪಾಪಿ ರೆಡ್ಡಿ ಮತ್ತು ತಾತನಾದ ಸಿಪಿ ರಾಮರೆಡ್ಡಿ ರವರ ನಡುವೆ ಆಗಿರುತ್ತದೆ. ಸಾಕ್ಷಿಯು ಮುಂದುವರೆದು ನನ್ನ ತಾತನವರಿಗೆ ಇಬ್ಬರು ಹೆಂಡತಿಯರು ಎನ್ನುತ್ತಾರೆ. ಸದರಿ ಶ್ರೀನಿವಾಸ ರೆಡ್ಡಿ ಮತ್ತು ಪಾಪಿರೆಡ್ಡಿರವರು ತಾತನವರ ಮೊದಲನೇ ಹೆಂಡತಿಯ ಮಕ್ಕಳಾಗಿರುತ್ತಾರೆ. ನಿಡಿ3 ರ ಪ್ರಕಾರ ನನ್ನ ತಾತನವರ 2 ನೇ ಹೆಂಡತಿಯ ಮಕ್ಕಳಿಗೆ ಪಾಲು ಹೋಗಿದೆಯಾ ಎಂದು ನನಗೆ ಗೊತಿತಲ್ಲ.

**6.** ಸದರಿ ನಿಡಿ3 ರಂತೆ ನನ್ನ ತಂದೆಯವರಾದ ಕೃಷ್ಣರೆಡ್ಡಿಗೂ ಕೂಡ ಪಾಲು ಬಂದಿರುತ್ತದೆ. ನಿಡಿ3 ರಂತೆ ನನ್ನ ತಂದೆಯವರಿಗೆ ಬಂದ ಆಸ್ತಿಗಳಲ್ಲಿ ನನ್ನ ತಂದೆಯವರೇ ಮಾಲೀಕರು ಎಂದರೆ ಇರಬಹುದು. ಈ ದಾವೆಯ ದಾವಾ ಆಸ್ತಿಯಾದ ಸರ್ವೆ ನಂ.126/7 ನಿಡಿ3 ವಿಭಾಗ ಪತ್ರದಲ್ಲಿ ನಮೂದಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ದಾವಾ ಆಸ್ತಿಯು ನಿಡಿ3 ರಲ್ಲಿ ಬಂದಿದ್ದು ಅವರೇ ಅದಕ್ಕೆ ಮಾಲೀಕರಾಗಿದ್ದು ಅವರಿಗೆ ಅದನ್ನು ಇನ್ನೊಬ್ಬರಿಗೆ ಮಾರಾಟ ಮಾಡುವ ಎಲ್ಲಾ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ. ಅದು ನನ್ನ ತಾತನ ಆಸ್ತಿ ಎನ್ನುತ್ತಾರೆ. ನನ್ನ ತಂದೆಯವರು ದಾವಾ ಆಸ್ತಿಯನ್ನು 1977 ನೇ ಸಾಲಿನಲ್ಲಿ ಈ ದಾವೆಯ ಮೂಲ ವಾದಿ ಆದ ನಂಜಪ್ಪಾಚಾರಿರವರಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1977 ರಿಂದ ಇಲ್ಲಿಯವರೆಗೆ ಈ ದಾವೆಯ ಮೂಲ ವಾದಿ ಆದ ನಂಜಪಾಪ್ಪಚಾರಿ ಅವರ ಮರಣಾ ನಂತರ ಅವರ ಮಕ್ಕಳು ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಸಾವದೀನದಲ್ಲಿದ್ದೇವೆ ಎನ್ನುತ್ತಾರೆ.

**7.** ನಾನು ನನ್ನ ಪ್ರಕಾರ ದಾವಾ ದಾವಾ ಆಸ್ತಿಯನ್ನು ನಾವು ಹೊಂದಿದ್ದೇವೆ ಎಂದು ತೋರಿಸಜವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿ‍ದ್ದೇನಾ ಎಂದರೆ ಇಲ್ಲ. ಈ ದಾವೆಯ ಮೂಲ ವಾದಿ ಆದ ನಂಜಪ್ಪಚಾರಿರವರು ಅನಕ್ಷರಸ್ಥರಾಗಿದ್ದು ಅವರಿಗೆ ಗಂಟಲು ಕ್ಯಾನ್ಸರ್ ಇದ್ದು ಸದರಿ ಕ್ರಯ ಪತ್ರ ಆದ ನಂತರ

ಖಾತೆ ಬದಲಾಯಿಸುವ ಬಗ್ಗೆ ಅವರಿಗೆ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ನಂಜಪ್ಪಾಚಾರಿರವರ ಆರೋಗ್ಯ ತೊಂದರೆಯನ್ನು ನಾವು ದುರುಪಯೋಗಪಡಿಸಿಕೊಂಡು ಸಹಾಯಕ ಕಮಿಷನರ್ ನ್ಯಾಯಾಲಯದ ಆದೇಶ ಇದ್ದರೂ ಸಹ ಅದನ್ನು ಉಲ್ಲಂಘಿಸಿ ನಿಪಿ8 ಮತ್ತು 9 ರಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1977 ರಲ್ಲಿ ನನ್ನ ತಂದೆಯವರು ಈ ದಾವೆಯ ಮೂಲ ವಾದಿ ಆದ ನಂಜಪ್ಪಾಚಾರಿ ರವರಿಗೆ ಕ್ರಯ ಪತ್ರವನ್ನು ಮಾಡಿಕೊಟ್ಟ ದಿನದಿಂದ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುವುದಿಲ್ಲ ಮತ್ತು ವಾದಿಯ ಕುಟುಂಬಸ್ಥರೆ ಸದರಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

8. ಸದರಿ 1977 ರ ದಾಖಲೆಯು ನೊಂದಾಯಿತ ದಾಖಲೆ ಆದ ಕಾರಣ ಈಗ ನಮ್ಮ ಹೆಸರಿನಲ್ಲಿ ಇರುವ ಖಾತೆಯು ನಂಜಪ್ಪಾಚಾರಿರವರ ಕುಟುಂಬಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಸದರಿ 1977 ರಿಂದ ಸುಮಾರು 40-45 ವರ್ಷಗಳು ಆದ ನಂತರ ನಾವು ನಿಪಿ8 ಮತ್ತು 9 ರಂತೆ ದಾಖಲೆಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1977 ರಲ್ಲಿ ನನ್ನ ತಂದೆಯವರು ದಾವಾ ಆಸ್ತಿಯನ್ನು ಮೂಲ ವಾದಿಗೆ ಮಾರಾಟ ಮಾಡಿದ್ದರೂ ಸಹ ಅದನ್ನು ಕಬಳಿಸುವ ಉದ್ದೇಶದಿಂದ ನಿಪಿ8 ಮತ್ತು 9 ರಂತೆ ದಾಖಲೆಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1977 ರಿಂದ ಮೂಲ ವಾದಿಗೆ ಸೇರಿದ ಆಸ್ತಿ ಆಗಿದ್ದು ನನಗಾಗಲೀ, ಇತರ ಪ್ರತಿವಾದಿಗಳಿಗೆ ಆಗಲೀ, ಅದರಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 48 ವರ್ಷಗಳಿಂದ ಮೂಲ ವಾದಿ ಮತ್ತು ಆತನ ಕುಟುಂಬದವರೇ ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

9. ನನ್ನ ಹಿಂದಿನ ಪಾಟೀಸವಾಲಿನಲ್ಲಿ ನಾನು ನನ್ನ ತಂದೆಯವರಾದ ಕೃಷ್ಣರೆಡ್ಡಿರವರು ಸಹಿ ಮಾಡಿದ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ್ದು ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿಯು ದಾಖಲೆಗಳನ್ನು ಹುಡುಕಿದ್ದು ಅದು ಸಿಕ್ಕಿಲ್ಲ ಎನ್ನುತ್ತಾರೆ. ನನ್ನ ತಂದೆಯವರಿಗೆ ವಿಭಾಗದಲ್ಲಿ 10 ರಿಂದ 15 ಆಸ್ತಿಗಳು ಬಂದಿದ್ದು ಅದಕ್ಕೆ ಸಂಬಂದ ಪಟ್ಟಂತೆ ಯಾವುದೇ ಸಹಿ ಮಾಡಿದ ದಾಖಲೆಗಳು ಇಲ್ಲವಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಈಗಲೂ ಸಹ ಮೂಲ ವಾದಿಯ ಕುಟುಂಬಸ್ಥರು ಸ್ವಾಧೀನದಲ್ಲಿ ಇದ್ದರೂ ಸಹ ಅವರಿಗೆ ತೊಂದರೆ ಕೊಡುವ ಸಲುವಾಗಿ ನ್ಯಾಯಾಲಯದಲ್ಲಿ ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**